ಬಾಯ್ತುಂಬ ಚಪ್ಪರಿಸಬಲ್ಲ ಎಲ್ಲ ತಮಾಷೆಗಳೂ ಅದರಲ್ಲಿದ್ದವು.

ಆದರೆ, ಮುಸ್ಲಿಮರ ದೇವರನ್ನು, ಮುಸ್ಲಿಮರ ದೇವದೂತರನ್ನು ಈ ಬಗೆಯಲ್ಲಿ ಸೃಜಿಸುವ 'ಅಭಿವ್ಯಕ್ತಿ ಸ್ವಾತಂತ್ರ್ಯ' ನಮಗೇಕಿಲ್ಲ ಎಂಬ ಪ್ರಶ್ನೆ ಚಪ್ಪರಿಸುವ ಹಿಂದೂಯೇತರರ ಮಿದುಳೊಳಗೆ ಯಾಕೆ ಹುಟ್ಟುವುದಿಲ್ಲ?

ಒಬ್ಬಳನ್ನೇ ಕಟ್ಟಿಕೊಂಡು ಹುಟ್ಟಿದ ಎರಡೇ ಮಕ್ಕಳ ಹೊಟ್ಟೆ, ಬಟ್ಟೆ, ಓದುಗಳನ್ನೇ ನಿಭಾಯಿಸಲಾಗದ ಈ ತುಟ್ಟಿಯ ದಿನಗಳಲ್ಲೂ ನಾಲ್ಕು ಮದುವೆಯ 'ಸುಖ'ವನ್ನು ಕಲ್ಪಿಸಿಕೊಂಡೇ (ಕಾಣುವ ಚಾನ್ಸ್ ಸಿಗುವುದಿಲ್ಲ), ಅವರಿಗಿರುವ 'ಸುಖ'ದ ಅವಕಾಶ ತಮಗೇಕಿಲ್ಲವೆಂದು ಕೊರಗುವ, 'ಅವಕಾಶ ವಂಚಿತ ಜನಾಂಗ'ಕ್ಕೆ ಬುದ್ಧಿ ಬರುವುದು ಯಾವಾಗ?

ಕುರಾನ್ ವಿಧಿಸಿದ ನಿಯಮಾನುಸಾರ ತನಗೆ ತಲಾಕ್ ಕೊಡದೆಯೇ ಮತ್ತೂ ಮೂವರನ್ನು ಕಟ್ಟಿಕೊಳ್ಳುವ ಅವಕಾಶವುಳ್ಳ ಗಂಡು ಕಾನೂನನ್ನು, ಪ್ರತಿಯೊಂದು ಹೆಣ್ಣೂ ಗುಟ್ಟಿನಲ್ಲಾದರೂ ವಿರೋಧಿಸುವುದಿಲ್ಲವೆ, ಎಂಬ ಪ್ರಶ್ನೆ ಮುಸ್ಲಿಮ್ ಗಂಡಿಗೇಕೆ ಹೊಳೆಯುವುದಿಲ್ಲ?

ಕುರಾನ್ ವಿಧಿಸಿದ ನಿಯಮಗಳಂತೆ (ಒಂದೇ ಮನೆಯಲ್ಲಿ ಜೊತೆಗೇ ಇದ್ದು, ಮೂರು ತಿಂಗಳು ಹತ್ತು ದಿನಗಳ ಅವಧಿಯಲ್ಲಿ ತಿಂಗಳಿಗೊಂದರಂತೆ ಮೂರು ತಲಾಕ್ ನೀಡುವ, ನನ್ನ ಈ ವಿವರಣೆಯಂತೆಯೇ ಸುಲಭವಾಗಿ ಅರ್ಥ ಮಾಡಿಕೊಳ್ಳಲಾಗದ, ಮತ್ತು ಆಚರಿಸಲು ಸುಲಭಸಾಧ್ಯವಲ್ಲದ ವಿಧಿಯಿದು). ತಲಾಕ್ ಕೊಟ್ಟ ಪತಿಮಹಾಶಯನೊಬ್ಬ ಮತ್ತೊಮ್ಮೆ ಅವಳನ್ನೇ ನಿಖಾಹ್ ಮಾಡಿಕೊಳ್ಳುವ ಮುನ್ನ ಅನುಸರಿಸಬೇಕಾದ ನಿಬಂಧನೆಗಳನ್ನು (ಬಹುಜನ ಊಹಿಸಿಕೊಂಡಿರುವಂತೆ, ಇದು ಒಂದು ರಾತ್ರಿಯ 'ನಾಟಕ'ವಲ್ಲ! ಕುರಾನ್ ವಿಧಿಯಂತೆ ಎಲ್ಲ ನಿಯಮಗಳನ್ನೂ ಪಾಲಿಸಿ, ತಲಾಕ್ ಪಡೆದುಕೊಂಡ ಹೆಣ್ಣೊಬ್ಬಳು, ಮುಂದೆ ಸಹಜವಾಗಿ ಬೇರೊಬ್ಬನನ್ನು ವಿವಾಹವಾಗಿ ಸಂಸಾರ ನಡೆಸುತ್ತಿದ್ದು, ಸಕಾರಣವಾಗಿ ಈತನೂ ಮುಂದೊಮ್ಮೆ ಕುರಾನ್ ವಿಧಿಸಿದ ನಿಯಮಗಳನ್ನೆಲ್ಲ ಪಾಲಿಸಿ ತಲಾಕ್ ಕೊಟ್ಟರೆ ಅಥವಾ ಗಂಡ ತೀರಿಕೊಂಡರೆ ಬಿಡುಗಡೆಗೊಂಡ ಆಕೆಗೆ ತನ್ನ ಹಿಂದಿನ ಗಂಡನನ್ನು ಅಥವಾ ಯಾವನನ್ನಾದರೂ ಮದುವೆಯಾಗಲು ಅಧಿಕಾರ ಸಿಗುತ್ತದೆ). ವಿರೋಧಿಸುವವರು, ಹಾಗೆ 'ಮರುನಿಕಾಹ್' ಮಾಡಿಕೊಂಡಿರುವ 'ಮಹಾಗಂಡಿನ' ಒಂದೇ ಒಂದು ವಿಳಾಸವನ್ನು (ನಲವತ್ತು ವರ್ಷಗಳ ಹಿಂದೆ (1978) ನಾನೇ ಬರೆದಿದ್ದ ಸುಳ್ಳು ಕತೆ 'ಅತ್ತ ಇತ್ತಗಳ ಸುತ್ತ ಮುತ್ತ'ದ ಕಲ್ಪಿತ ನಾಯಕನನ್ನು ಹೊರತುಪಡಿಸಿ) ಇದುವರೆಗೂ ಯಾರಿಂದಲೂ ಪತ್ತೆಮಾಡಲಾಗಿಲ್ಲ ಎಂಬ ಸತ್ಯವನ್ನು ಅವಕಾಶ(?)ವಂಚಿತ ಜನಾಂಗವೇಕೆ ಅರ್ಥಮಾಡಿಕೊಳ್ಳುವುದಿಲ್ಲ?

'ಒಮ್ಮೆ ಮುಗಿದು ಹೋದರೆ ಸಾಕು' ಎಂಬ ನಿಲುವಿನಿಂದಾದರೂ ಬಾಬರಿ ಮಸೀದಿ ಒಡೆದ ಜಾಗದಲ್ಲಿ ರಾಮಮಂದಿರ ಕಟ್ಟಿಕೊಳ್ಳಲು ಮುಸ್ಲಿಮ ಪಕ್ಷದವರು ಹಿಂದೂಪಕ್ಷದವರಿಗೆ ಯಾಕೆ ಸಮ್ಮತಿ ಸೂಚಿಸುವುದಿಲ್ಲ? ಇದು ಮುಗಿದರೆ ಮುಂದೆ, 'ಕಾಶಿ ಕೊಡಿ', 'ಮಥುರಾ ಕೊಡಿ' ಎಂಬ ಹಳೆ ಬೇಡಿಕೆ ಮತ್ತೆ ಹೊಸದಾಗಿ ಶುರುವಾದೀತೆಂಬ ಅಳುಕೆ?

ಈಗ ಭೂಮಿಯ ಮೇಲೆ ಬೇರೆ ಬೇರೆ ದೇಶಗಳಲ್ಲಿ ಬದುಕುತ್ತಿರುವ ಎಲ್ಲ ಧರ್ಮಗಳ ಅಲ್ಪಸಂಖ್ಯಾತರಿಗೆ ಹೋಲಿಸಿದರೆ, ಹಿಂದೂಸ್ತಾನದಲ್ಲಿರುವ ಅಲ್ಪಸಂಖ್ಯಾತರು ಅತಿ ಹೆಚ್ಚು ಸುಖಿಗಳು ಎಂಬ ವಾಸ್ತವವನ್ನು ಮುಸ್ಲಿಮರೇಕೆ ಒಪ್ಪಿಕೊಳ್ಳುವುದಿಲ್ಲ?

ಇಂಥ ಪ್ರಶ್ನೆಗಳೆಲ್ಲ ಕಾಡುತ್ತಲೇ ಇರುವುದರಿಂದ ನನ್ನ ಕಥಾ ಬರವಣಿಗೆ ದಿಕ್ಕುಗೆಟ್ಟಿದೆ.

✤